# <u>ಕರ್ನಾಟಕ ವಿಧಾನ ಪರಿಷತ್ತು</u>

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಚಿದಾನಂದ್ ಎಂ ಗೌಡ

(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 269

ಉತ್ತರಿಸಬೇಕಾದ ದಿನಾಂಕ : 16-07-2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಯಶಸ್ವಿನಿ ಯೋಜನೆಯಲ್ಲಿ ನೋಂದಣಿಗೆ ನಿಗದಿಪಡಿಸಲಾದ ಗುರಿ ಎಷ್ಟು; ಮತ್ತು ಇದರಲ್ಲಿ ಎಷ್ಟು ಸದಸ್ಯರು ಸೇರ್ಪಡೆಯಾಗಿದ್ದಾರೆ:</td><td rowspan="2">ರಾಜ್ಯದಲ್ಲಿ 2022-23ನೇ ಸಾಲಿನ ಆಯವ್ಯಯದಲ್ಲಿ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಘೋಷಿಸಿ ಪ್ರಾರಂಭಿಸಲಾಗಿದೆ. ದಿನಾಂಕ: 01-11-2022 ರಿಂದ ಜಾರಿಗೊಳಿಸಲಾಗಿದೆ. 2023-24ನೇ ಸಾಲಿಗೂ ಈ ಯೋಜನೆಯನ್ನು ಮುಂದುವರೆಸಲಾಗಿದೆ.<br><table>
<tr><th>ಕ್ರ ಸಂ.</th><th>ವರ್ಷ</th><th>ಸದಸ್ಯರ ನೋಂದಣಿ ಅವಧಿ</th><th>ವರ್ಷ</th><th>ಗುರಿ</th><th>ಸಾಧನೆ</th></tr>
<tr><td>1</td><td>2022-23</td><td>ನವೆಂಬರ್ 2022 ರಿಂದ ಮಾರ್ಚ್ 2023</td><td>2022-23</td><td>30.00 ಲಕ್ಷ</td><td>48.24 ಲಕ್ಷ</td></tr>
<tr><td>2</td><td>2023-24</td><td>ಜನವರಿ 2024 ರಿಂದ ಮಾರ್ಚ್ 2024</td><td>2023-24</td><td>50.00 ಲಕ್ಷ</td><td>41.54 ಲಕ್ಷ (ತಾತ್ಕಾಲಿಕ)</td></tr>
</table></td></tr>
<tr><td>ಆ)</td><td>2022-23ರಲ್ಲಿ ನೋಂದಣಿ ಮಾಡಿಕೊಂಡ ಸದಸ್ಯರ ಸಂಖ್ಯೆ ಎಷ್ಟು; 2023-24ನೇ ಸಾಲಿನಲ್ಲಿ ನೋಂದಣಿ ಮಾಡಿಕೊಂಡ ಸದಸ್ಯರ ಸಂಖ್ಯೆ ಎಷ್ಟು;</td></tr>
<tr><td>ಇ)</td><td>2023-24 ರಲ್ಲಿ ಸದಸ್ಯರ ನೋಂದಣಿ ಕಡಿಮೆಯಾಗಲು ಕಾರಣಗಳೇನು:</td><td>ಈ ಕೆಳಕಂಡ ಕಾರಣಗಳಿಂದಾಗಿ 2023-24 ರಲ್ಲಿ ನೋಂದಣಿ ಕಡಿಮೆಯಾಗಿರುತ್ತದೆ.<br><br>1. ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯು ಸಹಕಾರ ಸಂಘಗಳ ಸದಸ್ಯರಿಗಾಗಿ ಇರುವ ಯೋಜನೆಯಾಗಿದ್ದು, ಯೋಜನೆಯಡಿ ಸ್ವಯಂ ಪ್ರೇರಿತವಾಗಿ ಯಶಸ್ವಿನಿ ಸದಸ್ಯರಾಗಬೇಕೆ ಹೊರತು ಯಾರನ್ನು ಕಡ್ಡಾಯವಾಗಿ ಸದಸ್ಯರನ್ನಾಗಿ ಮಾಡಲು ಸಾಧ್ಯವಿಲ್ಲ.</td></tr>
</table>

| | | |
|---|---|---|
| | | 2. ಬಿಪಿಎಲ್ ಕಾರ್ಡ್ ಇದ್ದವರಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಉಚಿತ ಚಿಕಿತ್ಸೆಗಳ ಸೌಲಭ್ಯವಿರುತ್ತದೆ. ಅಂತಹ ಕೆಲವು ಸದಸ್ಯರು ಈ ಯೋಜನೆಯಡಿ ವಾರ್ಷಿಕ ವಂತಿಗೆ ಪಾವತಿಸಿ ಯಶಸ್ವಿನಿ ಯೋಜನೆ ಸದಸ್ಯರಾಗಲು ಮುಂದೆ ಬರುತ್ತಿಲ್ಲ. ಇದೇ ಅವಧಿಯಲ್ಲಿ ಸಾರ್ವತ್ರಿಕ ಚುನಾವಣಾ ಪ್ರಕ್ರಿಯೆಗಳು ಪ್ರಾರಂಭವಾಗಿದ್ದರಿಂದ ನೋಂದಣಿ ಪ್ರಕ್ರಿಯೆಗೆ ಸ್ವಲ್ಪ ಮಟ್ಟಿನ ಅಡಚಣೆಯಾಗಿರುತ್ತದೆ.<br><br>3. ಯೋಜನೆಯಡಿ ಇರುವ ಚಿಕಿತ್ಸಾ ದರಗಳು ಕಡಿಮೆ ಇದೆ ಎಂದು ಕೆಲವೊಂದು ಪ್ರತಿಷ್ಠಿತ/ಪ್ರಮುಖ ಆಸ್ಪತ್ರೆಗಳು ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಾಗಿ ಸೇರಿಕೊಳ್ಳದಿರುವುದರಿಂದ ತಮಗೆ ಬೇಕಾದ ಆಸ್ಪತ್ರೆಗಳಿಲ್ಲವೆಂಬ ಕಾರಣಕ್ಕಾಗಿ ಕೆಲವು ಜನರು ಯಶಸ್ವಿನಿ ಯೋಜನೆಯಲ್ಲಿ ಸೇರಿಕೊಳ್ಳಲು ಮುಂದೆ ಬಂದಿರುವುದಿಲ್ಲ.<br><br>ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ 2023–24 ನೇ ಸಾಲಿನಲ್ಲಿ ನೋಂದಣಿ ಕಡಿಮೆಯಾಗಿದೆ. |
| ಈ) | 2023–24 ರಲ್ಲಿ ನೋಂದಣಿಗೆ ನೀಡಿದ್ದ ಕಾಲಾವಕಾಶ ಎಷ್ಟು: | 2023–24ನೇ ಸಾಲಿನಲ್ಲಿ ಯಶಸ್ವಿನಿ ಸದಸ್ಯರ ನೋಂದಣಿ ಅವಧಿ ದಿನಾಂಕ: 01–01–2024 ರಿಂದ 31–03–2024 ರವರೆಗೆ(3 ತಿಂಗಳು) ಕಾಲಾವಕಾಶ ನೀಡಲಾಗಿತ್ತು. |
| ಉ) | ಪ್ರಮುಖ ಆಸ್ಪತ್ರೆಗಳನ್ನು ಯಶಸ್ವಿನಿ ಯೋಜನೆಯ ವ್ಯಾಪ್ತಿಗೆ ಸೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಯಶಸ್ವಿನಿ ಯೋಜನೆಯಡಿ ಅಳವಡಿಸಿಕೊಂಡಿರುವ ದರಗಳು ತುಂಬಾ ಹಳೆಯ ಅವಧಿಯ ದರಗಳೆಂದು, ಇವು ಅತ್ಯಂತ ಕಡಿಮೆ ಇದೆ ಎಂದು ತಿಳಿಸಿ ಕೆಲವು ಪ್ರತಿಷ್ಠಿತ/ಪ್ರಮುಖ ಆಸ್ಪತ್ರೆಗಳು ಈ ಯೋಜನೆಯ ವ್ಯಾಪ್ತಿಗೆ ಸೇರಿಕೊಂಡಿರುವುದಿಲ್ಲ.<br><br>ಆಸ್ಪತ್ರೆಗಳ ಮನವಿಯಂತೆ ಯಶಸ್ವಿನಿ ಯೋಜನೆಯಡಿ ಅಳವಡಿಸಿಕೊಂಡಿರುವ ಚಿಕಿತ್ಸಾ ದರಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ನೀಡಲು ತಜ್ಞ ವೈದ್ಯರನ್ನೊಳಗೊಂಡ ಒಂದು ಸಮಿತಿ ರಚಿಸಿ ವರದಿ ಪಡೆದು ಅದರ ಆಧಾರದ ಮೇಲೆ ದರ ಪರಿಷ್ಕರಣೆಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |

**ಸಂಖ್ಯೆ: ಸಿಒ 147 ಸಿಎಲ್ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**